

ಕಾಯಿಲೆಗಳಿಂದ ನರಳುವ ಅವರ ಗೋಳಾಟ, ಬದುಕಿನಲ್ಲಿ ಭರವಸೆಯನ್ನೇ ಕಳೆದುಕೊಂಡಂತಿದ್ದ ಕಾಂತಿಹೀನ ಮುಖಗಳ ಜನರು ಇದನ್ನೆಲ್ಲ ನೋಡುತ್ತ ಬ್ರಹ್ಮದತ್ತನಿಗೆ ಒಂದು ತೆರನಾದ ಜಿಗುಪ್ಸೆ ಮೂಡಲಾರಂಭಿಸಿತು. ಇನ್ನಷ್ಟು ಹೊತ್ತು ತಾನಿಲ್ಲಿದ್ದರೆ ತನಗೆ ಹುಚ್ಚೇ ಹಿಡಿಯಬಹುದೆಂದು ಅನ್ನಿಸಿ ಬ್ರಹ್ಮದತ್ತ ತನ್ನ ಯೋಚನೆಗೆ ತಾನೇ ಬೆಚ್ಚಿಬಿದ್ದ. ಹೌದು, ಈ ಪರಿಸರದಿಂದ ದೂರ ಹೋಗಿ ಇವರೇಕೆ ಬದುಕು ಕಟ್ಟಿಕೊಳ್ಳಬಾರದು ಎನ್ನುವ ಯೋಚನೆ ಹೊಳೆದು ಅದನ್ನು ವೆಂಕಟ್ರಮಣನಿಗೆ ಕೇಳಿಯೂ ಬಿಟ್ಟ. ‘ನಮ್ಮ ಹಿಂದಿನ ಒಂದು ತಲೆಮಾರಿನವರು ನೀವು ಹೇಳಿದಂತೆ ಒಂದೊಮ್ಮೆ ಇಂಥದ್ದೊಂದು ಪ್ರಯೋಗ ಮಾಡಿ ನೋಡಿದ್ದರಂತೆ. ಹುಟ್ಟುವ ಮಗುವಿಗೆ ಇಲ್ಲಿನ ನೆರಳು ಕೂಡ ಸೋಕಬಾರದೆಂದು ಸಾವಿರಾರು ಮೈಲಿ ದೂರ ಹೋದರೂ ಕೂಡ ಸಾವು ಅವರನ್ನು ಸ್ಪರ್ಶಿಸಲಿಲ್ಲ. ನಮ್ಮ ವಂಶಾಣುವಿನಲ್ಲೇ ಅಂಥದ್ದೊಂದು ದೋಷ ಬೇರುಬಿಟ್ಟಿರುವಾಗ ಯಾವ ಪ್ರಯೋಗದಿಂದಲೂ ಪ್ರಯೋಜನವಾಗಲಿಲ್ಲ’ ವೆಂಕಟ್ರಮಣ ನಿಟ್ಟುಸಿರು ಬಿಟ್ಟ.

ವೆಂಕಟ್ರಮಣನ ಬಲವಂತಕ್ಕೆ ಮಧ್ಯಾಹ್ನ ಒಂದೆರಡು ತುತ್ತು ಊಟ ಮಾಡಿ ಬ್ರಹ್ಮದತ್ತ ಸಾಯಂಕಾಲ ಬೆಂಗಳೂರಿಗೆ ಹಿಂದಿರುಗಲು ಸಿದ್ಧನಾದ. ಕಾಡಿನ ದಾರಿಯೆಂದು ವೆಂಕಟ್ರಮಣ ಮುಖ್ಯರಸ್ತೆಯವರೆಗೂ ಒಬ್ಬನನ್ನು ಜೊತೆಮಾಡಿ ಕಳುಹಿಸಿದ. ಬ್ರಹ್ಮದತ್ತನ ಮನಸ್ಸು ಇಡೀ ಘಟನೆಯಿಂದ ಒಂದುರೀತಿಯ ಕ್ಷೋಭೆಗೆ ಒಳಗಾಗಿತ್ತು. ದಾರಿಯಲ್ಲಿ ಜೊತೆಗೆ ಬಂದವನೊಡನೆ ಯಾವ ಮಾತನ್ನು ಆಡದೆ ಮೌನವಾಗಿ ಹೆಜ್ಜೆ ಹಾಕಿದ. ಮುಖ್ಯ ರಸ್ತೆಗೆ ಬಂದ ಕೆಲವೇ ನಿಮಿಷಗಳಲ್ಲಿ ಬಸ್ಸು ಬಂದು ನಿಂತಿತು. ಬಸ್ಸು ಪೂರ್ತಿ ಖಾಲಿಯಾಗಿತ್ತು. ಚಾಲಕ ಮತ್ತು ಕಂಡಕ್ಟರ್ ಸಿಗರೇಟು ಸೇದಲೆಂದು ರಸ್ತೆಯ ಬದಿಯಲ್ಲಿದ್ದ ಗೂಡಂಗಡಿ ಹೊಕ್ಕರು. ಬ್ರಹ್ಮದತ್ತ ಬಸ್ಸು ಹತ್ತಿ ಕೂತ. ಜೊತೆಗೆ ಬಂದವನು ಪಕ್ಕದಲ್ಲಿ ಕುಳಿತು ಬ್ರಹ್ಮದತ್ತನ ಕಿವಿಯಲ್ಲಿ ಉಸುರಿದ, ‘ನನ್ನೂರಿನ ನೀರಿನ ಗುಣ ನೋಡಿ, ಒಮ್ಮೆ ಇಲ್ಲಿನ ನೀರು ಕುಡಿದರೆ ಸಾಕು ಅವರಿಗೆ ಸಾವೆಂಬುದೇ ಇಲ್ಲ’. ‘ಯಾವ ನೀರು? ಅದೆಲ್ಲಿದೆ?’